ಇ) ಸೇತುವೆ ಎತ್ತರಗೊಳಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ? ಮುಖ್ಯಮಂತ್ರಿಗಳು ಅತೀವೃಷ್ಟಿ ವೀಕ್ಷಣೆಯ ಸಮಯದಲ್ಲಿ ಸದರಿ ಸೇತುವೆ ಎತ್ತರಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುವುದು ನಿಜವೇ

ಈ) ಹಾಗಿದ್ದಲ್ಲಿ, ಈ ಕಾಮಗಾರಿಯ ಬಗ್ಗೆ ಅಂದಾಜು ತಯಾರಾಗಿದೆಯೇ, ಹಾಗೂ ಹಣ ಬಿಡುಗಡೆ ಆಗಿದೆಯೇ ; ಹಾಗಿದ್ದಲ್ಲಿ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹುಕ್ಕೇರಿ-ಹತ್ತರಕಿ ಪಟ್ಟಣಗಳನ್ನು ಸೇರಿಸುವ ರಸ್ತೆ ಜಿಲ್ಲಾ ಮುಖ್ಯ ರಸ್ತೆಯಾಗಿದೆ.

ಆ) ಪ್ರವಾಹ ಬಂದಾಗ ಹಿರಣ್ಯಕೇಶಿ ನದಿಯ ಅಡ್ಡಲಾಗಿರುವ ಬಡಕುಂದ್ರಿ ಕೆಳಮಟ್ಟದ ಸೇತುವೆ ಮುಚ್ಚಿರುವ ವಿಷಯ ಗಮನಕ್ಕೆ ಬಂದಿದೆ.

ಇ) ಈ ಸೇತುವೆ ಕಾಮಗಾರಿ ಇದುವರೆವಿಗೂ ಆಯವ್ಯಯದಲ್ಲಿ ಸೇರಿರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 20-7-94ರಂದು ಈ ಕಾಮಗಾರಿಯನ್ನು ಪರಿಶೀಲಿಸಿ ಅಂದಾಜು ವೆಚ್ಚ ತಯಾರಿಸಿ ಸಲ್ಲಿಸಲು ಸೂಚಿಸಿದರು.

ಈ) ನದಿಯ ಪ್ರವಾಹ ಕಡಿಮೆ ಆದ ಮೇಲೆ ಸರ್ವೆ ಮಾಡಿ ಅಂದಾಜು ಪಟ್ಟಿ ತಯಾರಿಸಲಾಗುವುದು. ಸಧ್ಯಕ್ಕೆ ಹಣ ಬಿಡುಗಡೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಅಂದಾಜು ಪಟ್ಟಿ ಅನುಮೋದನೆಗೆ ಅನುದಾನ ದೊರೆತ ನಂತರ ಕಾಮಗಾರಿಯನ್ನು ಪೂರ್ಣ ಮಾಡುವ ಸಮಯವನ್ನು ತಿಳಿಸಬಹುದಾಗಿದೆ.

ವಿಷಯ : ಹಾರಂಗಿ ಎಡದಂಡೆ ನಾಲೆಯ ದುರಸ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 406 (44)

ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರಪೇಟೆ ತಾಲ್ಲೂಕಿನ ಹಾರಂಗಿ ಎಡದಂಡೆ ನಾಲೆಯು ತೀರಾ ಹಾಳಾಗಿದ್ದು ಹೆಚ್ಚಾಲಿ ಶಿರಾಗಾಲ, ಕಣಿವೆ ಹಾಗೂ ತೊರೆನೂರು ಗ್ರಾಮಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ದುರಸ್ಥಿಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಇಂತಹ ತೊಂದರೆ ಉಂಟಾಗಿರುವ ಬಗ್ಗೆ ಸರ್ಕಾರಕ್ಕೆ ಯಾವ ವರದಿಯು ಬಂದಿರುವುದಿಲ್ಲ.
ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.